# ಕರ್ನಾಟಕ ವಿಧಾನ ಪರಿಷತ್ತು

## 155ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : **1286**

ಸದಸ್ಯ ರಹೆಸರು : **ಶ್ರೀ ಶಶೀಲ್ ಜಿ.ನಮೋಶಿ**

**(ಶಿಕ್ಷಕರ ಕ್ಷೇತ್ರ)**

ಉತ್ತರಿಸುವ ದಿನಾಂಕ : **19-03-2025**

ಉತ್ತರಿಸುವ ಸಚಿವರು : **ಲೋಕೋಪಯೋಗಿ ಸಚಿವರು**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ವಿವಿಧ ಸ್ತರದ ಗುತ್ತಿಗೆದಾರರು ಈಗಾಗಲೇ ಪೂರ್ಣಗೊಳಿಸಿರುವ ಕಾಮಗಾರಿಗಳಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗದೆ ಆರ್ಥಿಕವಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು;</td><td>2023-24 ಹಾಗೂ 2024-25ನೇ ಸಾಲಿನಲ್ಲಿ ತೀರುವಳಿ ಮಾಡಿದ ಬಾಕಿ ಬಿಲ್ಲುಗಳ ಮೊತ್ತದ ವಿವರ ಕೆಳಕಂಡಂತಿದೆ.<br>(ರೂ.ಕೋಟಿಗಳಲ್ಲಿ)<br><table><tr><th>ಕ್ರ. ಸಂ</th><th>ವರ್ಷ</th><th>ತೀರುವಳಿ ಮಾಡಿದ ಬಾಕಿ ಬಿಲ್ಲುಗಳ ಮೊತ್ತ</th></tr><tr><td>1</td><td>2023-24</td><td>9130.11</td></tr><tr><td>2</td><td>2024-25</td><td>10076.41</td></tr><tr><td></td><td>ಒಟ್ಟು</td><td>19206.52</td></tr></table></td></tr>
<tr><td>ಆ)</td><td>ಕಳೆದ 2 ವರ್ಷಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇಲಾಖೆಯಿಂದ ಸರ್ಕಾರದ ವಿವಿಧ ಕಾಮಗಾರಿಗಳಿಗೆ ಅನುಮೋದನೆಗೊಂಡ ಅನುದಾನ ಎಷ್ಟು: ಇವುಗಳಲ್ಲಿ ಪೂರ್ಣಗೊಂಡ, ಬಾಕಿ ಉಳಿದ ಕಾಮಗಾರಿಗಳು ಎಷ್ಟು: ಈ ಕಾಮಗಾರಿಗಳಿಗೆ ಬಿಡುಗಡೆಯಾದ ಹಾಗೂ ಬಾಕಿ ಉಳಿದಿರುವ ಅನುದಾನವೆಷ್ಟು;</td><td>ಲೋಕೋಪಯೋಗಿ ಇಲಾಖೆಯಲ್ಲಿ 2023-24 ಹಾಗೂ 2024-25ನೇ ಸಾಲಿನಲ್ಲಿ ಅನುಮೋದನೆ ನೀಡಿದ ಮೊತ್ತದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. ಸದರಿ ಕಾಮಗಾರಿಗಳು ಪ್ರಸ್ತುತ ಪ್ರಗತಿಯಲ್ಲಿರುತ್ತವೆ.</td></tr>
<tr><td>ಇ)</td><td>ಯಾವ ಕಾಲಮಿತಿಯಲ್ಲಿ ಗುತ್ತಿಗೆದಾರರಿಗೆ ಬಿಡುಗಡೆಯಾಗಬೇಕಿರುವ ಬಾಕಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು?</td><td>ಆಯವ್ಯಯದಲ್ಲಿ ಒದಗಿಸಲಾಗಿರುವ ಹಾಗೂ ಪೂರಕ ಅಂದಾಜಿನಲ್ಲಿ ಒದಗಿಸಲಾಗುವ ಅನುದಾನವನ್ನು ಆಧರಿಸಿ ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲು ಕ್ರಮವಹಿಸಲಾಗುವುದು.</td></tr>
</table>

ಸಂ:ಲೋಇ/436/ಐಎಫ್ಎ/2025 (ಇ-ಕಛೇರಿ)

**ಸತೀಶಜಾರಕಿಹೊಳಿ**
(ಲೋಕೋಪಯೋಗಿ ಇಲಾಖೆ ಸಚಿವರು)

D:\2024\LAQ_LCQ_2024\3.ಮಾರ್ಚ್-25\LCQ\19-03-2025\436-LCQ-1286_ಶಶೀಲ್_ಜಿ.ನಮೋಶಿ\436-LCQ-1286_ಶಶೀಲ್_ಜಿ.ನಮೋಶಿ.Docx